# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/20/ಎಸಿಎಂ(2)/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 21-06-2018.

## -:: ಸು ತ್ತೋಲೆ ::-

ವಿಷಯ: **2018-19ನೇ ಸಾಲಿನ ಡಿಪ್ಲೋಮಾ ತರಗತಿಗಳನ್ನು ಪ್ರಾರಂಭಿಸುವಲ್ಲಿ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.**

-0000000-

2018-19ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳಲ್ಲಿನ ಡಿಪ್ಲೋಮಾ ತರಗತಿಗಳ ಪ್ರವೇಶ ಪ್ರಕ್ರಿಯೆಯ ನಡೆಯುತ್ತಿದ್ದು, ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ನಿಗಧಿತ ಅವಧಿಯೊಳಗೆ ಪಾಠ ಪ್ರವಚನಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಪ್ರಸ್ತುತ ಜಾರಿಯಲ್ಲಿರುವ ಶೈಕ್ಷಣಿಕ ವೇಳಾಪಟ್ಟಿಯನ್ನು ಪರಿಷ್ಕರಿಸಿ, ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

**2018-19ನೇ ಸಾಲಿನ ಮಾರ್ಪಾಡು ಮಾಡಲಾದ ಶೈಕ್ಷಣಿಕ ವೇಳಾಪಟ್ಟಿ**

| ಕ್ರ.ಸಂ | ಶೈಕ್ಷಣಿಕ ಕಾರ್ಯಕ್ರಮ | ದಿನಾಂಕ |
|---|---|---|
| 1. | 01, 03, 05ನೇ ಸೆಮಿಸ್ಟರ್‌ನ ತರಗತಿಗಳ ಪ್ರಾರಂಭ ಹಾಗೂ ಮುಕ್ತಾಯ | ಪ್ರಾರಂಭ : **02-07-2018**<br>ಮುಕ್ತಾಯ : **27-10-2018** |
| 2. | 01, 03, 05ನೇ ಸೆಮಿಸ್ಟರ್/ಸಪ್ಲಿಮೆಂಟರಿ ಪರೀಕ್ಷೆಗಳು (ಥಿಯರಿ ಮತ್ತು ಪ್ರಾಯೋಗಿಕ) | ಪ್ರಾಯೋಗಿಕ ಪರೀಕ್ಷೆ : **02-11-2018**<br>ಥಿಯರಿ ಪರೀಕ್ಷೆ : **15-11-2018** |
| 3. | 02, 04, 06ನೇ ಸೆಮಿಸ್ಟರ್‌ನ (ಮಧ್ಯಕಾಲಿನ ರಜೆ ಕಳೆದ ಮೇಲೆ) ತರಗತಿಗಳ ಪ್ರಾರಂಭ ಹಾಗೂ ಮುಕ್ತಾಯ | ಪ್ರಾರಂಭ : **04-12-2018**<br>ಮುಕ್ತಾಯ : **31-03-2019** |
| 4. | 02, 04 ಮತ್ತು 06ನೇ ಸೆಮಿಸ್ಟರ್/ವಾರ್ಷಿಕ ಪರೀಕ್ಷೆಗಳು (ಥಿಯರಿ ಮತ್ತು ಪ್ರಾಯೋಗಿಕ) | ಪ್ರಾಯೋಗಿಕ ಪರೀಕ್ಷೆ : **04-04-2019**<br>ಥಿಯರಿ ಪರೀಕ್ಷೆ : **16-04-2019** |
| 5. | ಆಂತರಿಕ ಪರೀಕ್ಷೆ | ಪ್ರಥಮ : **6ನೇ ವಾರದಲ್ಲಿ**<br>ದ್ವಿತೀಯ : **10ನೇ ವಾರದಲ್ಲಿ**<br>ತೃತೀಯ : **14ನೇ ವಾರದಲ್ಲಿ** |
| 6. | ಆಂತರಿಕ ಪರೀಕ್ಷೆಯ ಅಂಕಗಳ ಪರಿಶೀಲನೆ/ ಲೆಕ್ಕಾಚಾರ | 15ನೇ ವಾರದಲ್ಲಿ |
| 7. | ಮಧ್ಯಂತರ ತರಗತಿಗಳ ಹಾಜರಾತಿ ಪರಿಶೀಲನೆ ಮತ್ತು ವಿದ್ಯಾರ್ಥಿಗಳಿಗೆ/ಪೋಷಕರಿಗೆ ಸೂಚನೆ ನೀಡುವುದು | 08ನೇ ವಾರದಲ್ಲಿ |

ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ನಿಯಮಾನುಸಾರ ಪಾಠ ಪ್ರವಚನಗಳನ್ನು ನಡೆಸಲು ಸೂಕ್ತ ವ್ಯವಸ್ಥೆ ಮಾಡುವುದಲ್ಲದೆ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮೇಲ್ಕಂಡ ಶೈಕ್ಷಣಿಕ ವೇಳಾಪಟ್ಟಿಯನುಸಾರ ಡಿಪ್ಲೋಮಾ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವುದರ ಮೂಲಕ ಪಠ್ಯಕ್ರಮದನ್ವಯ ನಿಗಧಿತ ಪಾಠ ಪ್ರವಚನಗಳನ್ನು ಮುಗಿಸುವಲ್ಲಿ ಕ್ರಮತೆಗೆದುಕೊಂಡು ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ವರದಿ ಮಾಡುವುದು.

ಪ್ರಯುಕ್ತ, ಇದನ್ನು ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪಾಠ ಪ್ರವಚನಗಳನ್ನು ಮುಕ್ತಾಯಗೊಳಿಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ನಿರ್ದೇಶಕರು

**ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ ಹಾಗೂ ಅನುಸರಣೆಗಾಗಿ.**

**ಪ್ರತಿ:–**

1. ಜಂಟಿ ನಿರ್ದೇಶಕರು(ಆಡಳಿತ), ತಾಂ.ಶಿ.ನಿ, ಬೆಂಗಳೂರು.
2. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂ.ಶಿ.ನಿ, ಬೆಂಗಳೂರು.
3. ಆಡಳಿತಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು
4. ನಿರ್ದೇಶಕರ ಆಪ್ತಶಾಖೆಗೆ.
5. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು.
6. ಸಂಯೋಜನಾಧಿಕಾರಿಗಳು, ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ. ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
7. ರಿಜಿಸ್ಟ್ರಾರ್(ಪರೀಕ್ಷೆ), ತಾಂ.ಶಿ.ನಿ, ಬೆಂಗಳೂರು
8. ಕಛೇರಿ ಪ್ರತಿ.